**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 274 ಕೆಒಎಲ್ 93

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ : 04-08-1993.

**ಸುತ್ತೋಲೆ**

ವಿಷಯ :- ಟಿಪ್ಪಣಿಗಳು ಪತ್ರ ವ್ಯವಹಾರ ಕನ್ನಡದಲ್ಲಿರದಿದ್ದರೆ ಕಡತಗಳನ್ನು ಹಿಂದಿರುಗಿಸುವ ಬಗ್ಗೆ - ಕನ್ನಡ ಜಾಗೃತಿ ವರ್ಷದ ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಘೋಷಣೆ.

ದಿನಾಂಕ 2-8-1993ರಂದು ಕನ್ನಡ ಜಾಗೃತಿ ವರ್ಷದ ಉದ್ಘಾಟನೆಯನ್ನು ನೆರವೇರಿಸಿದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ಆಗಸ್ಟ್ 15ರನಂತರ ಸಚಿವರಿಗೆ ಹಾಗೂ ಅಧಿಕಾರಿಗಳಿಗೆ ಸಲ್ಲಿಸುವ ಎಲ್ಲಾ ಕಡತಗಳಲ್ಲಿನ ಟಿಪ್ಪಣಿ ಮತ್ತು ಪತ್ರ ವ್ಯವಹಾರ ಕನ್ನಡದಲ್ಲಿರಬೇಕೆಂದೂ, ಒಂದು ಪಕ್ಷ ಅವು ಕನ್ನಡದಲ್ಲಿರದಿದ್ದರೆ ಕಡತಗಳನ್ನು ಹಿಂದಿರುಗಿಸಬೇಕೆಂಬ ಆದೇಶ ನಿಡಬೇಕೆಂದು ಸೂಚಿಸಿದ್ದಾರೆ.

ಅದರಂತೆ, ಆಗಸ್ಟ್ 15, 1993ರ ನಂತರ ಸಚಿವರಿಗೆ ಮತ್ತು ಅಧಿಕಾರಿಗಳಿಗೆ ಸಲ್ಲಿಸುವ ಎಲ್ಲಾ ಕಡತಗಳಲ್ಲಿನ ಟಿಪ್ಪಣಿಗಳು ಕಡ್ಡಾಯವಾಗಿ ಕನ್ನಡದಲ್ಲಿರತಕ್ಕದ್ದು, ಒಂದು ಪಕ್ಷ ಅವು ಕನ್ನಡದಲ್ಲಿರದಿದ್ದರೆ ಕಡತಗಳನ್ನು ಹಿಂದಿರುಗಿಸಲು ಈ ಮೂಲಕ ಆದೇಶಿಸಿದೆ.

ಸಹಿ/-
**(ಜಾ. ಕ್ರಿ. ಲಿಸ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ